ಪಿ ಡಬ್ಲ್ಯೂ ಃ 1

ದಿನಾಂಕ 19-06-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಆರ್ ಕೆ ವಕೀಲರಿಂದ 1 ರಿಂದ 5ನೇ ಪ್ರತಿವಾದಿಗಳ ಪರ:

ನನ್ನ ಮಗ ಶಿಕ್ಷಕ ವೃತ್ತಿ ಮಾಡುತ್ತಾರೆ. ಅವರು ಆರೋಗ್ಯವಾಗಿದ್ದಾರೆ. ಅವರಿಗೆ ದಾವಾ ಸ್ವತ್ತು ಹಾಗೂ ದಾವೆಯ ಬಗ್ಗೆ ಮಾಹಿತಿ ಇದೆ. ದಾವಾಸ್ತಿ ನಾವು ಖರೀದಿ ಮಾಡಿದಾಗ ವ್ಯವಸಾಯದ ಜಮೀನಾಗಿತ್ತು. ಅದರ ವಿಸ್ತೀರ್ಣ 15 ಗುಂಟೆ ಎಂದರೆ ಸರಿ. ದಾವಾಸ್ವತ್ತಿನ ಪೂರ್ವಕ್ಕೆ ರಾಮಪ್ಪ ಕಂಬಳಿ, ಪಶ್ಚಿಮಕ್ಕೆ ಮಹದೇವಪ್ಪ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಶಂಕರಗೌಡರ ಜಮೀನು ಬರುತ್ತದೆ. ನಾವು ಕ್ರಯ ಮಾಡಿಕೊಂಡ 15 ಗುಂಟೆ ಜಮೀನಿನ ಪೈಕಿ 5 ಗುಂಟೆ ಜಮೀನನ್ನು ರಾಮಪ್ಪ ಎಂಬುವವರಿಗೆ ಕ್ರಯ ಮಾಡಿದ್ದೇವೆ ಎಂದರೆ ಸರಿ. ಸದರಿ 15 ಗುಂಟೆ ಜಮೀನನ್ನು ವ್ಯವಸಾಯೇತರ ಜಮೀನಾಗಿ ಪರಿವರ್ತಿಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ದಾವಾಸ್ತಿಯನ್ನು ಪರಿವರ್ತನೆ ಗೊಳಿಸಲು ಪಂಚಾಯತಿ ವ್ಯಾಪ್ತಿಗೆ ಸೇರಿಸಿದ್ದೇವೆ ಎನ್ನುತ್ತಾರೆ. 10 ಗುಂಟೆ ಜಮೀನಿಗೆ ಸದರಿಯಂತೆ ಚಕ್ಕುಬಂದಿ ಇದೆ. ದಾವೆಯಲ್ಲಿ ಬರೆಸಿರುವ ಚಕ್ಕುಬಂದಿ ಬಗ್ಗೆ ಗೊತ್ತು. ದಾವಾಸ್ತಿಯ ಪೂರ್ವಕ್ಕೆ ರಾಮಪ್ಪ ಕಂಬಳಿಯವರ ಜಮೀನು ಎಂದು ಬರೆಸಿದ್ದೇನೆ. 10 ಗುಂಟೆಗೆ ಚಕ್ಕುಬಂದಿ ಬರೆಸಿದ್ದೇನೆ. ದಾವೆಗೆ ನನ್ನ ಮಗ ಮಾಹಿತಿ ನೀಡಿದ್ದಾರೆ. ಆ ಕಾರಣ ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ದಾವೆಯ ಕಾರಣ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲನ್ನು ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.